



# ರೈನ್‌ಬೊ ಟ್ರೀ!

ಸಾಮಾನ್ಯವಾಗಿ ಯಾವುದೇ ಮರ ನೋಡಿದರೂ ಕಂದು ಬಣ್ಣದ ಕಾಂಡವಿರುತ್ತದೆ. ಚಿತ್ರದಲ್ಲಿರುವ ಈ ಮರಗಳನ್ನು ಗಮನಿಸಿ. ಇದರ ಕಾಂಡದ ಬಣ್ಣ ಕಾಮನಬಿಲ್ಲನ್ನು ನೆನಪಿಗೆ ತರುತ್ತದೆ.ಅತ್ಯಂತ ನೈಸರ್ಗಿಕವಾಗಿ ಬೆಳೆಯುವ ಈ ಮರದ ಹೆಸರು ಯೂಕಲಿಪ್ಟಸ್ ಡಿಗ್ಲುಪ್ಟಾ. ಇದು ಆಕರ್ಷಕ ಬಣ್ಣವನ್ನು ಹೊಂದಿದ್ದು, ಇದನ್ನು ರೈನ್‌ಬೊ ಟ್ರೀ ಎಂದೂ ಕರೆಯಲಾಗುತ್ತದೆ.

ಇದು ನ್ಯೂ ಬ್ರಿಟನ್, ನ್ಯೂ ಜಿನಿಯ ಮುಂತಾದ ಭಾಗದಲ್ಲಿ ಬೆಳೆಯುತ್ತದೆ. ಅಲ್ಲದೆ ಈ ಮರ ಉತ್ತರ ಗೋಳದಲ್ಲಿ ಹುಲುಸಾಗಿ ಬೆಳೆಯುತ್ತದೆ. ಈ ಮರವಿರುವ ಭಾಗದಲ್ಲಿ ಉತ್ತಮ ಮಳೆಯೂ ಆಗುತ್ತದೆ. ಮರದ ತೊಗಟೆಯ ಮೇಲೆ ನೀಲಿ, ನೇರಳೆ, ಕಿತ್ತಳೆ, ಮೆರೂನ್ ಬಣ್ಣದ ಕಾಂಡವನ್ನು ಹೊಂದಿದ್ದು ಇದರ ಮೇಲೆ ಯಾವ ಚಿತ್ರಕಲಾವಿದನೂ ಬಣ್ಣ ಬಳಿದಿಲ್ಲ, ಇದು ಅಪ್ಪಟ ಪ್ರಕೃತಿಯ ಸೃಷ್ಟಿ. ಮೊದಲ ಹಂತದಲ್ಲಿ ಹಸರು ಬಣ್ಣದಿಂದ ಕೂಡಿದ ಕಾಂಡ, ಕ್ರಮೇಣ ಕಿತ್ತಳೆ, ಕೆಂಪು, ಹಸುರು, ನೀಲಿ ಹಾಗೂ ಕಂದು ಬಣ್ಣಕ್ಕೆ ತಿರುಗಿ ನೋಡಲು ಆಕರ್ಷಕವಾಗಿರುತ್ತದೆ. ನೀಲಗಿರಿ ಮರವನ್ನೇ ಹೋಲುವ ಇದನ್ನು ಅಲಂಕಾರಿಕ ಪೀಠೋಪಕರಣ, ಕಾಗದ ತಯಾರಿಕೆಗೆ ಬಳಸಲಾಗುತ್ತದೆ.

ಈ ಮರ ಆರು ಅಡಿ ಅಗಲ ಹಾಗೂ 200 ಅಡಿ ಎತ್ತರ ಬೆಳೆಯುತ್ತದೆ. ಇದನ್ನು ಸದ್ಯ ಪಾರ್ಕ್‌ಗಳಲ್ಲಿಯೂ ಬೆಳೆಯಲಾಗುತ್ತದೆ. ಅಮರಿಕದಲ್ಲಿ ರೈನ್‌ಬೊ ಟ್ರೀ ಈಗೀಗ ಹೆಚ್ಚು ಜನಪ್ರಿಯವಾಗುತ್ತಿದೆ. ಕ್ಯಾಲಿಫೋರ್ನಿಯಾದ ದಕ್ಷಿಣ ಭಾಗ, ಫ್ಲೋರಿಡ, ಟೆಕ್ಸಾಸ್‌ಗಳಲ್ಲಿ ಈ ಮರ ಬೆಳೆಸಲಾಗುತ್ತಿದ್ದು ಇಲ್ಲಿಸುಮಾರು 100ರಿಂದ 125 ಅಡಿ ಎತ್ತರದವರೆಗೆ ಬೆಳೆಯುತ್ತದೆ. ಪ್ರಕೃತಿ ವೈಚಿತ್ರ್ಯಗಳ ಆಗರ. ಅದ್ಭುತ ನಿಸರ್ಗ ಸಿರಿಯನ್ನು ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ ಕೂಡ.

★ ಯು. ಅನಂತ್